# ಕರ್ನಾಟಕ ರಾಜ್ಯ ಮಾನವ ಹಕ್ಕುಗಳ ಆಯೋಗ

3ನೇ ಮಹಡಿ, 5ನೇ ಹಂತ, ಬಹುಮಹಡಿ ಕಟ್ಟಡ, ಡಾ॥ ಬಿ.ಆರ್.ಅಂಬೇಡ್ಕರ್ ವೀಧಿ, ಬೆಂಗಳೂರು–01

ಸಂಖ್ಯೆ: ಮಾಹಆ 26 ಆಡಳಿತ 2022

ದಿನಾಂಕ: 23/02/2022

## ಪ್ರಕಟಣೆ

ಕರ್ನಾಟಕ ರಾಜ್ಯ ಮಾನವ ಹಕ್ಕುಗಳ ಆಯೋಗಕ್ಕೆ ಮಂಜೂರಾದ ಈ ಕೆಳಕಾಣಿಸಿದ ಹುದ್ದೆಗೆ ಗುತ್ತಿಗೆ ಆಧಾರದ ಮೇಲೆ ತಾತ್ಕಾಲಿಕವಾಗಿ ನೇಮಕಾತಿ ಮಾಡಿಕೊಳ್ಳಲು ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಈ ನೇಮಕಾತಿಯು ಪ್ರಥಮತಃ 6 ತಿಂಗಳ ಅವಧಿಗೆ ಅಥವಾ ನೇಮಕಾತಿಯಾದವರ ಸೇವೆಯು ತೃಪ್ತಿಕರವೆಂದು ಕಂಡುಬಂದಲ್ಲಿ ಪುನಃ ಮುಂದುವರೆಸುವುದು ಆಯೋಗದ ವಿವೇಚನೆಗೆ ಒಳಪಟ್ಟಿರುತ್ತದೆ.

**ಸೂಕ್ತ ಅಭ್ಯರ್ಥಿಗಳನ್ನು ಸಂದರ್ಶನದ ಮೂಲಕ ಆಯ್ಕೆ ಮಾಡಲಾಗುವುದು.**

| ಕ್ರ ಸಂ | ಪದನಾಮ | ವೇತನ | ಹುದ್ದೆಗಳ ಸಂಖ್ಯೆ | ಅರ್ಹತೆ/ ವಿದ್ಯಾರ್ಹತೆ ಮತ್ತು ಅನುಭವ |
|---|---|---|---|---|
| 1. | ವಿಲೇಖನಾಧಿಕಾರಿ | ರೂ.51,550/– ಪ್ರತಿ ಮಾಹೆ ಮತ್ತು ಕಛೇರಿಗೆ ಬರಲು ವಾಹನ ಸೌಲಭ್ಯ/ ವಾಹನ ಭತ್ಯೆ | 01 | i. ಮಾನ್ಯತೆ ಪಡೆದ ಯಾವುದೇ ವಿಶ್ವವಿದ್ಯಾನಿಲಯದಿಂದ ಕಾನೂನು ಪದವಿ ಪಡೆದವರಾಗಿರಬೇಕು.<br>ii. ಉಚ್ಛ ನ್ಯಾಯಾಲಯದಲ್ಲಿ ವಿಲೇಖನಾಧಿಕಾರಿಯಾಗಿ ಅಥವಾ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರಾಗಿ ಸೇವೆ ಸಲ್ಲಿಸಿದ ಅನುಭವ ಹೊಂದಿದವರಾಗಿರಬೇಕು.<br>iii. ಕಂಪ್ಯೂಟರ್ ವಿಷಯದಲ್ಲಿ ಜ್ಞಾನ ಹೊಂದಿದವರು ಹಾಗೂ ಕನ್ನಡ ಮತ್ತು ಆಂಗ್ಲ ಭಾಷೆಯಲ್ಲಿ ಕಾರ್ಯ ನಿರ್ವಹಿಸಿದ ಅನುಭವ ಇರುವವರಿಗೆ ಆದ್ಯತೆ ನೀಡಲಾಗುವುದು. |
| | **ಒಟ್ಟು** | | **01** | |

ದಿನಾಂಕ: 01/01/2022ಕ್ಕೆ 62 ವರ್ಷ ವಯೋಮಿತಿ ಒಳಗಿನ ಅಭ್ಯರ್ಥಿಗಳು ಮಾತ್ರ ಅರ್ಜಿ ಸಲ್ಲಿಸಬಹುದು.

ಈ ನೇಮಕಾತಿಗಳು ತಾತ್ಕಾಲಿಕವಾಗಿ ಪ್ರಥಮತಃ 6 ತಿಂಗಳ ಅವಧಿಗೆ ಅಥವಾ ಸರ್ಕಾರದಿಂದ ನಿಯೋಜನೆ ಮೇರೆಗೆ ಭರ್ತಿಯಾಗುವವರೆಗೆ ಅಥವಾ ಆಯೋಗದ ಮುಂದಿನ ಆದೇಶದವರೆಗೆ ಆಯೋಗದ ವಿವೇಚನೆಗೊಳಪಟ್ಟಿದ್ದು, ಇದರಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ.

ಈಗಾಗಲೇ ಆಯೋಗಕ್ಕೆ ಯಾವುದೇ ಹುದ್ದೆಗೆ ನೇರವಾಗಿ ಅರ್ಜಿ ಸಲ್ಲಿಸಿರುವವರೂ ಸಹ ಈ ಪ್ರಕಟಣೆಯನ್ನು ಉಲ್ಲೇಖಿಸಿ ಮತ್ತೊಮ್ಮೆ ಅರ್ಜಿ ಸಲ್ಲಿಸಬೇಕು. ಅವರು ಈಗಾಗಲೇ ಸಲ್ಲಿಸಿರುವ ಅರ್ಜಿಗಳನ್ನು ಪರಿಗಣಿಸುವುದಿಲ್ಲ.

.....2

ಆಸಕ್ತಿ ಇರುವ ಅಭ್ಯರ್ಥಿಗಳು ನಿಗದಿತ ಪ್ರಪತ್ರದಲ್ಲಿ ಮುಚ್ಚಿದ ಲಕೋಟೆಯಲ್ಲಿ ಅಂಚೆ ಮೂಲಕ ಅಥವಾ ಇ-ಮೇಲ್ ಮೂಲಕ ದಿನಾಂಕ: **21/03/2022** ರಂದು ಅಥವಾ ಅದಕ್ಕಿಂತ ಮುಂಚಿತವಾಗಿ ತಲುಪುವಂತೆ ಸಲ್ಲಿಸಬಹುದು. ಲಕೋಟೆಯ ಮತ್ತು ಅರ್ಜಿಯ ಮೇಲೆ " ವಿಲೇಖನಾಧಿಕಾರಿ ಹುದ್ದೆಗಾಗಿ ಅರ್ಜಿ" ಎಂದು ನಮೂದಿಸಿರಬೇಕು. ಇ-ಮೇಲ್ ವಿಳಾಸ: secretary-kshrc@karnataka.gov.in.

ಅರ್ಜಿಯನ್ನು ಈ ಕೆಳಕಾಣಿಸಿದ ವಿಳಾಸಕ್ಕೆ ಕಳುಹಿಸುವುದು:

ಕಾರ್ಯದರ್ಶಿಗಳು,<br>
ಕರ್ನಾಟಕ ರಾಜ್ಯ ಮಾನವ ಹಕ್ಕುಗಳ ಆಯೋಗ,<br>
5ನೇ ಹಂತ, ಬಹುಮಹಡಿ ಕಟ್ಟಡ, 3ನೇ ಮಹಡಿ,<br>
ಬೆಂಗಳೂರು-560001.

ಕಾರ್ಯದರ್ಶಿ<br>
ಕರ್ನಾಟಕ ರಾಜ್ಯ ಮಾನವ ಹಕ್ಕುಗಳ ಆಯೋಗ